## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 24.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಿಂದಃ**

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ತಯಾರಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನಮ್ಮ ಲಾರಿ ಮಾಲೀಕರು ನನಗೆ ಫೋನ್ ಮಾಡಿ ನಮ್ಮ ಲಾರಿಗೆ ಯಾವುದೋ ಒಂದು ವಾಹನ ಡಿಕ್ಕಿಪಡಿಸಿದೆ ಎಂದು ಪೊಲೀಸರು ತಿಳಿಸುತ್ತಾರೆಂದು ಹೇಳಿದ್ದು ಆ ಬಗ್ಗೆ ನನ್ನ ಫೋನ್ ಕಾಲ್ ವಿವರಗಳನ್ನು ಹಾಜರಪಡಿಸಿಲ್ಲ. ನಮ್ಮ ಲಾರಿ ಮಾಲೀಕರು ಫೋನ್ ಮಾಡಿದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ನಮ್ಮ ಲಾರಿ ಮಾಲೀಕರು ಪೊಲೀಸ್ ಠಾಣೆಗೆ ಹೋಗಿ ಫಿರ್ಯಾದಿ ಸಲ್ಲಿಸಿರುತ್ತಾರಾ ಅಥವಾ ಇಲ್ಲ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತವಾದ ದಿನಾಂಕ ನನಗೆ ಗೊತ್ತಿಲ್ಲ ಆದರೆ ಎರಡು ವರ್ಷದ ಹಿಂದೆ ಅಪಘಾತವಾಗಿರುತ್ತದೆ. ಪೊಲೀಸ್ ಠಾಣೆಗೆ ನೀವು ಫಿರ್ಯಾದಿ ನೀಡಿದ ಬಗ್ಗೆ ದಾಖಲೆಯನ್ನು ಹಾಜರಪಡಿಸಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ನಾನು ಪೊಲೀಸ್ ಠಾಣೆಗೆ ಹೋಗಿದ್ದೆ ಅಲ್ಲಿ ಪೊಲೀಸರು ನನ್ನ ಸಹಿಗಳನ್ನು ದಾಖಲೆಗಳಿಗೆ ಪೆಡದುಕೊಂಡಿರುತ್ತಾರೆ ಹಾಗೂ ಸ್ವಲ್ಪ ಜನರನ್ನು ನನ್ನ ಜೊತೆ ನಿಲ್ಲಿಸಿ ನನ್ನ ಫೋಟೋ ಸಹ ತೆಗೆದಿರುತ್ತಾರೆಂದು ನುಡಿಯುತ್ತಾರೆ ನಿಪಿ.3 ಹೇಳಿಕೆಯನ್ನು ನಾನೇ ಪೊಲೀಸರಿಗೆ ನೀಡಿರುತ್ತೇನೆ ಹಾಗೂ ಅದರ ಮೇಲೆ ನನ್ನ ಸಹಿ ಇರುತ್ತದೆ. ನಿಪಿ.3 ರ ಪ್ರಕಾರ ಅಪಘಾತ ನಿಮ್ಮ ತಪ್ಪಿನಿಂದ ಆಗಿದೆ ಎಂದು ನೀವೇ ಒಪ್ಪಿ ಅದಕ್ಕೆ ಸಹಿ ಮಾಡಿರುತ್ತಿರಿ ಎಂದರೆ ಸಾಕ್ಷಿ ನಾನು ದಾವಣಗೆರೆಗೆ ಹೋಗಿದ್ದೆ ಹಾಗೂ ಅಪಘಾತವಾದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತ ನನ್ನ ತಪ್ಪಿನಿಂದ ಆಗಿದ್ದರೂ ಸಹ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಅಪಘಾತದಲ್ಲಿ ನಿಮ್ಮ ತಪ್ಪು ಇಲ್ಲ ಎಂದು ದೋಷಾರೋಪಣೆಪಟ್ಟಿಯಲ್ಲಿ ಪ್ರಶ್ನಿಸಿರುತ್ತಿರಾ ಎಂದರೆ ಸಾಕ್ಷಿ ಅದನ್ನು ಪ್ರಶ್ನಿಸಲು ನನಗೆ

ಆರ್ಥಿಕ ಸಾಮರ್ಥ್ಯ ಇಲ್ಲ ಹಾಗೂ ಎರಡು ವರ್ಷಗಳಿಂದ ನೌಕರಿ ಕಳೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವ ವಿಷಯಗಳಿಗೆ ಯಾವುದೇ ದಾಖಲೆಗಳ ಆಧಾರ ಇಲ್ಲದಿದ್ದರೂ ಸಹ ಸುಳ್ಳು ಸಂಗತಿಯನ್ನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಹನವನ್ನು ಅಪಘಾತಪಡಿಸಿ ಓಡಿ ಹೋದ ಆರೋಪವನ್ನು ನನ್ನ ಮೇಲೆ ಹಾಕಲಾಗಿದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**